ಇಲ್ಲಿಯೊ ಮನೆಗಳ ವಿನ್ಯಾಸದಲ್ಲೇ ಹಿಂಬಾಗಿಲ ಪ್ರವೇಶ ರದ್ದಾಗಿದೆ. ಹೀಗಾಗಿ ಮಹಿಳೆಯರು ಪಡಸಾಲೆಯನ್ನೇ ಆಡುಂಬೊಲ ಮಾಡಿಕೊಂಡಿದ್ದಾರೆ. ಇದು ಮಹಿಳೆಯರನ್ನು ಹಿತ್ತಲಿಗೆ ತಳ್ಳಿ ಜಗುಲಿಯನ್ನು ಒಡ್ಡೋಲಗ ಮಾಡಿಕೊಂಡಿದ್ದ ಗಂಡಸರ ಯಜಮಾನಿಕೆಯ ವಿರುದ್ಧ ಸ್ತ್ರೀಸಂಕುಲ ಸಾಧಿಸಿದ ಗುಪ್ತ ವಿಜಯವೆಂದೂ ಅನಿಸುತ್ತದೆ. ಪಡಸಾಲೆಯಿಂದ ಹೊರಗೆ ಹಾಕಲ್ಪಟ್ಟ ಗಂಡಸರು, ಅಸಹಾಯಕರಾಗಿ ಜಗಲಿಕಟ್ಟೆ, ಗುಡಿಯ ಕೈಸಾಲೆ, ಅಂಗಡಿ ಮುಂದಿನ ಹಲಗೆ, ಬೇವಿನಕಟ್ಟೆ, ಮರದಡಿ ನಿಲ್ಲಿಸಲಾದ ಟೈರ್‌ಬಂಡಿಗಳ ಮೇಲೆ ಕುಳಿತೊ ಮಲಗಿಯೊ ಕಾಲ ಕಳೆಯುವಂತಾಯಿತು.

ಈಚೆಗೆ ಹಂಪಿರೋಡನ್ನು ಅಗಲೀಕರಿಸಲು ಆಗಮಿಸಿದ ಹಿಟಾಚಿಯೊಂದು ರಸ್ತೆಬದಿಯ ಮನೆಗಳನ್ನು ಬರ್ತಡೆ ಕೇಕು ಕತ್ತರಿಸಿದಂತೆ ಬಗೆದು ಹಾಕಿತು. ಇಡೀ ರೋಡು ಭೂಕಂಪಕ್ಕೆ ಸಿಕ್ಕಂತೆ ಅಸ್ತವ್ಯಸ್ತವಾಯಿತು. ಹಿರಿಯರು ತಮ್ಮ ಪ್ರಾಯದಲ್ಲಿ ಎಷ್ಟು ಕಷ್ಟದಿಂದ ಮನೆ ಕಟ್ಟಿದೆವೆಂದು ಗತಕಾಲಕ್ಕೆ ತೆರಳಿ ಮರುಗಲಾರಂಭಿಸಿದರು; ಹೊಸ ತಲೆಮಾರಿನ ಸೊಸೆಯಂದಿರು, ನಾವು ಮಾಡುವುದನ್ನು ಗಂಧರ್ವರು ಮಾಡಿದರು ಎಂಬಂತೆ, ಹಿಟಾಚಿಗೆ ಒಳಗೇ ಕೃತಜ್ಞತೆ ಸಲ್ಲಿಸುತ್ತ, ಸೋರುಬಡುಕ ಮಾಳಿಗೆ ಮನೆಯಿಂದ ವಿಮೋಚನೆ ಪಡೆದ ಖುಶಿಯಲ್ಲಿದ್ದರು. ಬೆಡ್ರೂಮು –ಲ್ಯಾವೆಟ್ರಿ ಇರುವ

